ಮಾಡಿಕೊಂಡ ಹುಡುಗಿ, ಮರುದಿನ ಮಳೆರಾಯ ಬರುವಾಗ ಬಾಗಿಲೇ ತೆರೆಯುವುದಿಲ್ಲ. 'ನಾನೇನು ಅನ್ಯಾಯ ಮಾಡಿದೆ ಇವಳಿಗೆ?' ಎಂದು ಕೋಪಗೊಂಡ ಅವನು 'ಇವರ ಐಶ್ವರ್ಯವೆಲ್ಲ ಹಾಳಾಗಿ ದರಿದ್ರ ಬರಲಿ' ಎಂದು ಕೋಪಗೊಂಡು ಹಿಂದಿರುಗುತ್ತಾನೆ. ಮರುದಿನದಿಂದ ಮನೆಗೆ ಬರುವುದನ್ನು ನಿಲ್ಲಿಸುತ್ತಾನೆ. ಆಗ ಊರಿಗೆಲ್ಲ ಬಡತನ ಬರುತ್ತದೆ. ಹುಡುಗಿ ಸೌದೆ ಹೊರುವ ಕೆಲಸ ಮಾಡುತ್ತಾಳೆ. ಮುಂದೆ ದೇವೇಂದ್ರನ ಮಧ್ಯಪ್ರವೇಶದಿಂದ ಜಗಳ ಪರಿಹಾರವಾಗ್ತದೆ. ಮಾಡಿದ ತಪ್ಪಿಗೆ ಗಿಣಿಗೆ ಶಿಕ್ಷೆಯಾಗುತ್ತದೆ. ಮುಂದೆ ಮಳೆರಾಯ ಆಗಾಗ ಬಂದು ಹೋಗುತ್ತಾನೆ. ಎಲ್ಲರೂ ಸುಖವಾಗಿದ್ದಾರೆ. ಹೀಗೆ ಮಳೆರಾಯ ಬಂದರೆ, ಎಲ್ಲರಿಗೂ ಐಶ್ವರ್ಯ, ಬಾರದಿದ್ದರೆ ದಾರಿದ್ರ್ಯ. ಉತ್ತರವಾಗಲೀ ದಕ್ಷಿಣವಾಗಲೀ ಮಳೆ ಇರುವಲ್ಲಿ ಮಳೆರಾಯನ ಕಥೆಗಳೂ ಇರುತ್ತವೆ. ಮರುಭೂಮಿಯಲ್ಲಿ ಮಳೆರಾಯನ ಕಥೆಗಳು ಇಲ್ಲವಂತೆ.

ಇನ್ನೊಂದು ಘಟನೆಯನ್ನು ಹೇಳಿ ಈ ಮಳೆಕಥೆ ನಿಲ್ಲಿಸುತ್ತೇನೆ. ನನ್ನ ತಾಯಿಯ ತವರುಮನೆ ಇದ್ದದ್ದು ಕಮಿಲ ಎಂಬಲ್ಲಿ. ಎರಡೂ ಊರುಗಳ ನಡುವೆ ಏಳೆಂಟು ಮೈಲುಗಳ ಅಂತರ. ವಾಟೆಕಜೆಯಿಂದ ಕಮಿಲಕ್ಕೆ ಹೋಗುವ ಹಾದಿಯಲ್ಲಿ ಬಳ್ಳಕ್ಕ ಸಿಗುತ್ತದೆ. ಬಳ್ಳಕ್ಕದಲ್ಲೊಂದು ಹೊಳೆ. ಬೇಸಿಗೆಯಲ್ಲಿ ಬತ್ತಿ ಬರಡಾಗುವ ಬಳ್ಳಕ್ಕ ಹೊಳೆಯು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಈ ಕಾಲಘಟ್ಟದಲ್ಲಿ ಅಜ್ಜಿ ಮನೆಗೆ ಹೋಗುವುದು ಬಹಳ ಕಷ್ಟ. ಒಮ್ಮೆ ಏನೋ ತುರ್ತಾಗಿ ಅಮ್ಮ ಅಜ್ಜಿಮನೆಗೆ ಹೊರಟರು. ನಾನಿನ್ನೂ ಶಾಲೆಗೆ ಸೇರಿರಲಿಲ್ಲ. 'ನೀನೂ ಬಾ' ಅಂದರು ಅಮ್ಮ. ವಾಟೆಕಜೆಯಲ್ಲಿ ಮಳೆ ಸುರಿಯುತ್ತಿತ್ತು. ಅಮ್ಮ ಹೇಳಿದರು-'ಬೇಗ ಬೇಗ ನಡೀಬೇಕು, ಮಳೆ ಹೆಚ್ಚಾದರೆ ಬಳ್ಳಕ್ಕ ಹೊಳೆ ದಾಟುವುದು ಕಷ್ಟ'. 'ಸರಿ' ಅಂದುಕೊಂಡು ಹೊರಟೆ. ಅಮ್ಮ ಬೀಸ ಬೀಸ ನಡೆಯುತ್ತಿದ್ದರು. ನಂದು ಸಣ್ಣಮಟ್ಟನ ಓಟವೇ ಸರಿ. ಬಳ್ಳಕ್ಕ ಹೊಳೆ ತಲುಪಿದಾಗ ಹೊಳೆಯ ನೀರು ಆಗಷ್ಟೇ ಕೆಂಪಾಗುತ್ತಿತ್ತು. ಮಳೆ ಸುರಿಯುತ್ತಲೇ ಇದ್ದರೂ ಹೊಳೆ ಪೂರ್ತಿ ತುಂಬಿರಲಿಲ್ಲ. ಅಮ್ಮ ಹೊಳೆದಾಟುವ ಧೈರ್ಯ ಮಾಡಿದರು. ನನ್ನ ಕೈ ಹಿಡಿದು ನಿಧಾನವಾಗಿ ಹೊಳೆಗಿಳಿದರು. ಗೊರಬೆ ತಲೆಯಿಂದಿಳಿದು ಕಂಕುಳು ಸೇರಿತು. ಅಮ್ಮ ಹೇಳಿದರು -'ನೀರು ಹೆಚ್ಚಾಗ್ತಾ ಇದೆ, ಬೇಗ ದಾಟಬೇಕು, ನೀರು ಎಷ್ಟು ಹೆಚ್ಚಾದರೂ ಹೊಳೆಯಲ್ಲಿ ನಡೆಯುವಾಗ ನೆಲ ಬಿಡಬಾರದು'. ಹೀಗೆ ಇಬ್ಬರೂ ಅರ್ಧಹೊಳೆ ದಾಟಿರಬಹುದು. ನೀರಿನ ಪ್ರವಾಹ ಹೆಚ್ಚುತ್ತಲೇ ಇತ್ತು. ಆತಂಕದಲ್ಲಿದ್ದ ಅಮ್ಮ 'ಕಾಲು ಮಾತ್ರ ನೆಲದಿಂದ ಬಿಡಬೇಡ' ಎಂದು ಹೇಳುತ್ತಲೇ ಇದ್ದರು. ನೀರು ಸೊಂಟ ದಾಟಿ ನನ್ನ ಎದೆಯ ಹತ್ತಿರ ತಲುಪುವಷ್ಟರಲ್ಲಿ ಕಾಲುಗಳು ನೆಲದಿಂದ ಬೇರ್ಪಟ್ಟವು. ಅಮ್ಮ ಗಟ್ಟಿಯಾಗಿ ಕೈ ಹಿಡಿದಿದ್ದರೂ ಕಾಲು ನೆಲ ಬಿಟ್ಟ ತಕ್ಷಣ ಆಯ ತಪ್ಪಿತು. ಕ್ಷಣ ಮಾತ್ರದಲ್ಲಿ ನಾನು ಪ್ರವಾಹದ ಸೆಳೆತಕ್ಕೊಳಗಾಗಿ ಹೊಳೆಯಲ್ಲಿ ಮುಂದಕ್ಕೆ ತೇಲಿಹೋದೆ. ಏನೇಕಲ್ಲಿನಲ್ಲಿ ಕಲಿತ ಈಜು ಸ್ವಲ್ಪ ಪ್ರಯೋಜನಕ್ಕೆ ಬಂತು. ಸುಮಾರು 100 ಮೀಟರಿನಷ್ಟು ಮುಂದಕ್ಕೆ ಹೋಗಿ ಹೇಗೋ ಆ ಕಡೆಯ ದಡ ಸೇರಿಕೊಂಡೆ. ಮತ್ತೆ ಅಮ್ಮನನ್ನು ಸೇರಿಕೊಂಡಾಗ ಮಳೆ, ಹೊಳೆಗಳ ನಡುವೆ ಕಣ್ಣೀರು ಬೆರೆತು ಹೋಗಿತ್ತು.

ಹೀಗೆ ಮಳೆ ಅಂದರೆ ಅನೇಕ ಕಥೆಗಳು. ಕೂತ್ಕುಂಜ ಶಾಲೆಗೆ ಹೋಗುವಾಗ ಹಾದಿಯಲ್ಲಿ ಕಾಣುತ್ತಿದ್ದ ನೀರಿನ ಒರತೆಯ ಬದಿಯಲ್ಲಿ ಕುಳಿತು, ಒರತೆಯನ್ನು ಬಗೆಯುತ್ತಾ, ಚಿಮ್ಮುವ ನೀರಿಗೆ ಬೆರಳೊಡ್ಡುತ್ತಾ, ಶಾಲೆಯನ್ನೇ ಮರೆತು ಕುಳಿತದ್ದೂ ಉಂಟು. ಬಂಟಮಲೆಯ ಅತಿದೊಡ್ಡ ಮರಗಳ ಎಡೆಯಿಂದ ಬಿಸಿಲು ಮತ್ತು ಮಳೆ ಒಟ್ಟಿಗೆ ಬಂದಾಗ ಕುದ್ಕನ (ನರಿ) ಮದುವೆಗೆ ತಯಾರಾದದ್ದೂ ಇದೆ.

ಇಂದಿನ ದೆಹಲಿಯಂತಲ್ಲದ ಬಿಳಿಮಲೆಯ ಅಂಗಳದಲ್ಲಿ ನಿಂತು ಆಕಾಶದ ಕಡೆಗೆ ಮುಖ ಮಾಡಿದಾಗ ಮುಖದ ಮೇಲೆ ಹನಿಗಳು ಚಿಮ್ಮುವುದನ್ನು ಅನುಭವಿಸಲು ಈಗಲೂ ಅದೆಷ್ಟೋ ಖರ್ಚುಮಾಡಿಕೊಂಡು ಊರಿಗೆ ಹೋಗುತ್ತೇನೆ. ಹೆಚ್ಚು ಕಡಿಮೆ ಈಗಲೂ ಹಾಗೆಯೇ ಇರುವ ಕರಿಮಲೆಯಲ್ಲಿ ನಿಂತು ಆಕಾಶದತ್ತ ದಿಟ್ಟಿಸುತ್ತೇನೆ. ಸುತ್ತುತ್ತಿರುವ ಮೋಡಗಳಲ್ಲಿ ಪಂಪ, ಕುಮಾರವ್ಯಾಸರ ಕಾವ್ಯದ ಸಾಲುಗಳನ್ನು ಕಾಣುತ್ತೇನೆ. ಕಪ್ಪೆಗಳ ಕೂಗು, ಸೊಳ್ಳೆಗಳ ಝೇಂಕಾರ, ಜಿಗಣೆಗಳ ಸದ್ದಿಲ್ಲದ ಚಲನೆಗಳ ನಡುವೆ ದಿನಗಳು ಕಳೆದುಹೋಗುತ್ತವೆ.

●